ಭಾರತದ ಸಂವಿಧಾನದ 213(2)(ಎ) ಅನುಚ್ಛೇದದ ಮೇರೆಗೆ:

ಕರ್ನಾಟಕ ರಾಜ್ಯದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದಂತೆ ಈಗ ಜಾರಿಯಲ್ಲಿರುವ ಅಧಿನಿಯಮಕ್ಕೆ ಬದಲಾಗಿ ಒಂದು ವ್ಯಾಪಕ ಅಧಿನಿಯಮವನ್ನು ಜಾರಿಗೆ ತರುವ ಸಂಬಂಧದಲ್ಲಿ ಹೊರಡಿಸಿರುವ ಸಂವ್ಯಶಾಇ/26/ಶಾಸನ/2008, ದಿನಾಂಕ 02.06.2009ರ ಆಧ್ಯಾದೇಶ ಸಂಖ್ಯೆ 2ನ್ನು ಮಂಡಿಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಜಿ.ಕರುಣಾಕರರೆಡ್ಡಿ, (ಕಂದಾಯ) ಸಚಿವರ ಪರವಾಗಿ: ಮಾನ್ಯ ಅಧ್ಯಕ್ಷರೆ,
ಭಾರತದ ಸಂವಿಧಾನದ 213(2)(ಎ) ಅನುಚ್ಛೇದದ ಮೇರೆಗೆ:

1957ರ ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ ಅನುಸೂಚಿಗೆ ತಿದ್ದುಪಡಿ ಮಾಡಿ ಹೊರಡಿಸಿರುವ ಡಿಪಿಎಎಲ್/23/ಶಾಸನ/2009, ದಿನಾಂಕ 04.06.2009ರ ಆದ್ಯಾದೇಶ ಸಂಖ್ಯೆ 5ನ್ನು ಮಂಡಿಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಬಿ.ಎನ್. ಬಚ್ಚೇಗೌಡ, (ಕಾರ್ಮಿಕ) ಸಚಿವರ ಪರವಾಗಿ: ಮಾನ್ಯ ಅಧ್ಯಕ್ಷರೆ,
1961ರ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ 41ರ ಪ್ರಕರಣದ ಮೇರೆಗೆ:

1963ರ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ನಿಯಮಾವಳಿಗಳಲ್ಲಿನ ನಿಯಮ 24ಎ ಹಾಗೂ 26ನ್ನು ಪ್ರತಿಯೋಜಿಸಿ **ದಿನಾಂಕ 31.12.2008**ರಂದು ಹೊರಡಿಸಲಾಧ **ಎಲ್‌ಡಿ/324/ಎಲ್‌ಇಟಿ/2008**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

1948ರ ಕರ್ನಾಟಕ ಕಾರ್ಖಾನೆಗಳ ಅಧಿನಿಯಮದ ಕಲಂ 115(2)ರ ಮೇರೆಗೆ:

1. 1969ರ ಕರ್ನಾಟಕ ಕಾರ್ಖಾನೆಗಳ ನಿಯಮಾವಳಿಗಳ ನಿಯಮ 3, 3ಎ(1), 5,6,8,10 ಹಾಗೂ 11ನ್ನು ತಿದ್ದುಪಡಿ ಮಾಡಿ **ದಿನಾಂಕ 29.12.1999**ರಂದು ಹೊರಡಿಸಲಾದ **ಕಾಇ/18/ಕಬಾನಿ/1995/(1)**ನೇ ಸಂಖ್ಯೆಯ ಅಧಿಸೂಚನೆ.

2. 1994ರ ಕರ್ನಾಟಕ ಕಂಟ್ರೋಲ್ ಆಫ್ ಇಂಡಸ್ಟ್ರೀಯಲ್ ಮೇಜರ್ ಆಕ್ಸಿಡೆಂಟ್ ಹಜಾರ್ಡ್ ನಿಯಮಾವಳಿಗಳ ನಿಯಮ 1,2,3,4,5,6,7,8,10,11,13,15,16ಗಳ ತಿದ್ದುಪಡಿ, ನಿಯಮ 3ಎ, ಹಾಗೂ ಅನುಸೂಚಿ 8ಎನ್ನು ಹೊಸದಾಗಿ ಸೇರ್ಪಡೆಗೊಳಿಸಿ, ನಿಯಮ 9 ಮತ್ತು 14ನ್ನು ತೆಗೆದುಹಾಕಿ ಹಾಗೂ ನಿಯಮ 12, ಅನುಸುಚಿ 1,2,3,4 ಮತ್ತು 7ನ್ನು ಬದಲಾಯಿಸಿ **ದಿನಾಂಕ 29.11.2001**ರಂದು ಹೊರಡಿಸಲಾದ **ಕಾಇ/19/ಕಬಾನಿ/1998**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

1947ರ ಕರ್ನಾಟಕ ಕೈಗಾರಿಕಾ ವಿವಾದ ಕಾಯ್ದೆಯ ಕಲಂ 40(3)ರ ಮೇರೆಗೆ:

1947ರ ಕರ್ನಾಟಕ ಕೈಗಾರಿಕಾ ವಿವಾದ ಅಧಿನಿಯಮದ ಮೊದಲನೇ ಅನುಸೂಚಿಯಲ್ಲಿ ಕೆಲವು ತಿದ್ದುಪಡಿ ಮಾಡಿ ಕ್ರಮ ಸಂಖ್ಯೆ 32 ನಂತರ 33 ಹಾಗೂ 34ರ ಉಪಬಂಧಗಳನ್ನು ಸೇರ್ಪಡೆಗೊಳಿಸಿ **ದಿನಾಂಕ 09.03.2000**ರಂದು ಹೊರಡಿಸಲಾದ **ಕಾಇ/31/ಕಬಾನಿ/2000**ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಕುಮಾರಿ ಶೋಭಾ ಕರಂದ್ಲಾಜೆ, (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್) ಸಚಿವರ ಪರವಾಗಿ: ಮಾನ್ಯ ಅಧ್ಯಕ್ಷರೆ,

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಕಲಂ 320ರ ಮೇರೆಗೆ

1. 2004ರ ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ಜಮಾಬಂದಿ ನಿರ್ವಹಣೆ) ನಿಯಮಗಳನ್ನು ರಚಿಸಿ **ದಿನಾಂಕ 15.03.2005**ರಂದು ಹೊರಡಿಸಲಾದ **ಗ್ರಾಅಪ/252/ಜಿಪಸ/2003**ನೇ ಸಂಖ್ಯೆಯ ಅಧಿಸೂಚನೆ.

2. 2004ರ ಕರ್ನಾಟಕ ಪಂಚಾಯತ್ ರಾಜ್ (ವಾರ್ಡ್ ಸಭೆ ಮತ್ತು ಗ್ರಾಮ ಸಭೆ) ನಿಯಮಗಳನ್ನು ರಚಿಸಿ **ದಿನಾಂಕ 15.03.2005**ರಂದು ಹೊರಡಿಸಲಾದ **ಗ್ರಾಅಪ/260/ಜಿಪಸ/2003**ನೇ ಸಂಖ್ಯೆಯ ಅಧಿಸೂಚನೆ.

3. 1996ರ ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಪಂಚಾಯಿತಿಗಳ ಹಣಕಾಸು ಮತ್ತು ಲೆಕ್ಕಗಳು) ನಿಯಮಗಳಿಗೆ ತಿದ್ದುಪಡಿಗಳನ್ನು ತಂದು **ದಿನಾಂಕ 25.05.2006**ರಂದು ಹೊರಡಿಸಲಾದ **ಗ್ರಾಅಪ/37/ಜಿಪಸ/2005**ನೇ ಸಂಖ್ಯೆಯ ಅಧಿಸೂಚನೆ.